ಸಂಪಾದಕೀಯ

# ಸತ್ಯಸಾಕ್ಷಾತ್ಕಾರ ಮತ್ತು ಕಾರ್ಯಕುಶಲತೆ

ಸತ್ಯದ ಕ್ಷೇತ್ರವೇ ಬೇರೆ, ಕಾರ್ಯದ ಕ್ಷೇತ್ರವೇ ಬೇರೆ. ಸತ್ಯ ಅಲೌಕಿಕ ಮತ್ತು ಕರ್ಮ ಲೌಕಿಕ. ಅಲೌಕಿಕ ಕ್ಷೇತ್ರದಲ್ಲಿ ಕೇವಲ ಇರುವಿಕೆ, ಲೌಕಿಕ ಕ್ಷೇತ್ರದಲ್ಲಿ ಕೇವಲ ಮಾಡುವಿಕೆ. ಆದ್ದರಿಂದ ಇವೆರಡೂ ಕ್ಷೇತ್ರಗಳು ಸಂಪೂರ್ಣ ವಿರುದ್ಧವಾದುವುಗಳಂತೆ ಕಂಡುಬರುತ್ತವೆ. ಮುಂಡಕೋಪನಿಷತ್ತು (೧.೨.೧೨) ಕೂಡ ಹೇಳುತ್ತದೆ, ನಾಸ್ತ್ಯಕೃತಃ ಕೃತೇನ—"ಅಕೃತವಾದುದು ಕೃತದಿಂದ ದೊರೆಯುವುದಿಲ್ಲ," ಎಂದು. ಕ್ರಿಯೆಯನ್ನು ಮಾಡುತ್ತಲೇ ನಿಷ್ಕ್ರಿಯ ಅಥವಾ ಕೇವಲ ಇರುವಿಕೆಯ ಸ್ಥಿತಿಯನ್ನು ಮುಟ್ಟುವುದು ಹೇಗೆ? ಇರುವಿಕೆಯ ಸ್ಥಿತಿಯನ್ನು ಮುಟ್ಟಿದ ಮೇಲೆ, ಅಂದರೆ ಸತ್ಯಸಾಕ್ಷಾತ್ಕಾರವಾದಮೇಲೆ ಅದು ಕಾರ್ಯಕ್ಷೇತ್ರದ ಮೇಲೆ ಯಾವ ರೀತಿ ಪರಿಣಾಮವನ್ನು ಉಂಟುಮಾಡಬಲ್ಲದು? ಇವೆರಡರಲ್ಲಿಯೂ ಸಂಬಂಧವನ್ನು ಕಲ್ಪಿಸಲು ಸಾಧ್ಯವೇ? ಈ ವಿಷಯವನ್ನು ಚರ್ಚಿಸೋಣ.

ಜ್ಞಾನ ಮತ್ತು ಕ್ರಿಯೆಗಳಿಗೆ ಅನ್ಯೋನ್ಯ ಸಂಬಂಧವಿದೆ. ಅವು ಜೀವನದಿಂದ ಬೇರ್ಪಡಿಸಲಾಗದ ಅಂಶಗಳು.

## ಜ್ಞಾನ ಮತ್ತು ಕ್ರಿಯೆ ಒಂದೇ

ಜೀವನದ ಎರಡು ಬಹು ಮುಖ್ಯ ಅಂಶಗಳು ಯಾವುವೆಂದರೆ ಜ್ಞಾನ ಮತ್ತು ಕ್ರಿಯೆ. ಸಾಮಾನ್ಯವಾಗಿ ಕ್ರಿಯೆ ಜ್ಞಾನವನ್ನು ಅನುಸರಿಸುತ್ತದೆ—ಯಾವುದೋ ವಸ್ತುವಿನ ಜ್ಞಾನ ಕ್ರಿಯೆಯನ್ನು ಪ್ರಚೋದಿಸುತ್ತದೆ. ಏನನ್ನಾದರೂ ನೋಡಿದಾಗ ಅಥವಾ ಕೇಳಿದಾಗ ಮತ್ತು ಅದರ ಬಗ್ಗೆ ತಿಳಿದಾಗ ಅದನ್ನು ಪಡೆಯಲು ಮುಂದಾಗುತ್ತೇವೆ, ಇಲ್ಲವೇ ಅದರಿಂದ ದೂರ ಹೋಗುತ್ತೇವೆ ಅಥವಾ ಅದನ್ನು ನಾಶ ಮಾಡುತ್ತೇವೆ, ಮತ್ತೆ ಕೆಲವೊಮ್ಮೆ ಉದಾಸೀನರಾಗಿರುತ್ತೇವೆ. ಗಾಢನಿದ್ರೆಯ ಸಮಯದಲ್ಲಿ ಯಾವ ವಸ್ತುವಿನ ಜ್ಞಾನವೂ ಇಲ್ಲದಿರುವುದರಿಂದ ಅಲ್ಲಿ ಯಾವ ಕ್ರಿಯೆಯೂ ಇರುವುದಿಲ್ಲ. ಆದ್ದರಿಂದ ಜ್ಞಾನ ಮತ್ತು ಕ್ರಿಯೆಗಳಿಗೆ ಅನ್ಯೋನ್ಯ ಸಂಬಂಧವಿದೆ ಮತ್ತು ಅವು ಜೀವನದಿಂದ ಬೇರ್ಪಡಿಸಲಾಗದ ಅಂಶಗಳು.

ಆದರೆ ಜ್ಞಾನ ಮತ್ತು ಕ್ರಿಯೆಗಳ ನಡುವೆ ನಿಜವಾಗಿಯೂ ವ್ಯತ್ಯಾಸವಿದೆಯೇ? ಜ್ಞಾನವನ್ನು ಕ್ರಿಯೆಯಿಂದ ಬೇರ್ಪಡಿಸಲಾಗುವುದಿಲ್ಲ. ತಿಳಿಯುವುದೇ ಒಂದು ಕ್ರಿಯೆ. ಜ್ಞಾನವೂ ಅಸಂಖ್ಯ ಭೌತಿಕ ಮತ್ತು ಮಾನಸಿಕ ಕ್ರಿಯೆಗಳನ್ನು ಒಳಗೊಂಡಿರುವುದು ಸೂಕ್ಷ್ಮ ಪರಿಶೀಲನೆಯಿಂದ ತಿಳಿದುಬರುತ್ತದೆ. ಬಾಹ್ಯ ವಸ್ತುಗಳು ಮತ್ತು ಘಟನೆಗಳು ಇಂದ್ರಿಯಗಳನ್ನು ಪ್ರಚೋದನೆಗೊಳಿಸುತ್ತವೆ, ಈ ಪ್ರಚೋದನೆಯು ಮಿದುಳಿನ ಕೇಂದ್ರಕ್ಕೆ ರವಾನಿಸಲ್ಪಡುತ್ತದೆ, ಮತ್ತು ಇಂದ್ರಿಯಗಳಿಂದ ಬಂದ ಸಂವೇದನೆಗಳನ್ನೆಲ್ಲ ಸಂಗ್ರಹಿಸಿ ಅದರ ಜೊತೆಗೆ ಹಿಂದಿನ ನೆನಪುಗಳನ್ನೂ ಸೇರಿಸಿ ಮನಸ್ಸು ವಿವಿಧ ಭಾವನೆಗಳನ್ನು ಸೃಷ್ಟಿಸುತ್ತದೆ. ಬಾಹ್ಯ ಸಂವೇದನೆಗಳ ಸಹಾಯವಿಲ್ಲದೆಯೂ ಮನಸ್ಸು ಭಾವನೆಗಳನ್ನು ಸೃಷ್ಟಿಸಬಲ್ಲದು. ಈ ಭಾವನೆಗಳ ಸೃಷ್ಟಿಯನ್ನೇ ನಾವು ಜ್ಞಾನವೆಂದು ಕರೆಯುವುದು. ಆದ್ದರಿಂದ ಜ್ಞಾನವೂ ಒಂದು ಕ್ರಿಯೆಯೇ ಆದಂತಾಯಿತು.

## ಚಲನೆಯನ್ನು ನೋಡುವ ನಿಶ್ಚಲ ಸಾಕ್ಷಿ

ಆದರೂ ಜ್ಞಾನವಿಲ್ಲದೆ ಕ್ರಿಯೆ ಸಾಧ್ಯವಿಲ್ಲ. ನಾವೇನಾದರೂ ಮಾಡಬೇಕಾದರೆ ನಮಗೆ ಅದರ ಜ್ಞಾನ ಇರಲೇಬೇಕು, ಮತ್ತು ಆ ಜ್ಞಾನ ಕ್ರಿಯೆಯ ಪರಿಣಾಮ. ಆದ್ದರಿಂದ ಜ್ಞಾನ ಮತ್ತು ಕ್ರಿಯೆಗಳನ್ನು ಪ್ರತ್ಯೇಕಿಸಲಾಗುವುದಿಲ್ಲ, ಅವು ಒಂದೇ. ಪರಿಸ್ಥಿತಿ ಹೀಗಿರುವುದರಿಂದ ಜೀವನ ಪ್ರಕ್ರಿಯೆಯನ್ನು ಜ್ಞಾನಪ್ರಕ್ರಿಯೆಯಿಂದ ಪ್ರತ್ಯೇಕಿಸಲಾಗುವುದಿಲ್ಲ. "ಜೀವಿಸುವುದೆಂದರೇ ತಿಳಿಯುವುದು" (to live is to know) ಎಂದು ಕೆಲವು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. "ಒಂದು ಜೀವಿಯು ವಾತಾವರಣದೊಡನೆ ಸ್ಪಂದಿಸುವ ಪ್ರಕ್ರಿಯೆಯು ಜ್ಞಾನಪ್ರತಿಕ್ರಿಯೆಯಿಂದ (cognitive reaction)ಕೂಡಿರುತ್ತದೆ ಮತ್ತು ಜೀವನ ಕ್ರಿಯೆ ಎಂದರೇನೇ ಜ್ಞಾನಕ್ರಿಯೆ" (Fritjof Capra, *The Web of Life*, p.267). ಜ್ಞಾನವು ಒಂದು ಕ್ರಿಯೆಯಾದುದರಿಂದ ಅದನ್ನು ಗುರುತಿಸುವ ಸ್ಥಿರವಾದ ಇನ್ನೊಂದು ಅಂಶ ಇರಬೇಕು. ಏಕೆಂದರೆ ಕ್ರಿಯೆಯೇ ಕ್ರಿಯೆಯನ್ನು ಗುರುತಿಸಲಾರದು, ಕ್ರಿಯೆಯನ್ನು ಮೀರಿದ ಏನೊ ಒಂದು ಇರಬೇಕು—ದಡದ ಮೇಲೆ ನಿಂತು ನದಿಯ ಪ್ರವಾಹವನ್ನು ವೀಕ್ಷಿಸುವಂತೆ. ಈ ಜ್ಞಾನ ಮತ್ತು ಕ್ರಿಯೆಗಳನ್ನು ಸಾಕ್ಷಿಯಂತೆ ನೋಡುತ್ತಿರುವವರು ಯಾರು? ಶ್ರೀಶಂಕರಾಚಾರ್ಯರು ಹೇಳುತ್ತಾರೆ:

**ಅಸ್ತಿ ಕಶ್ಚಿತ್ ಸ್ವಯಂ ನಿತ್ಯಮಹಂಪ್ರತ್ಯಯಲಂಬನಃ ।**
**ಅವಸ್ಥಾತ್ರಯ ಸಾಕ್ಷೀ ಸನ್ ಪಂಚಕೋಶವಿಲಕ್ಷಣಃ ॥**

(ವಿವೇಕಚೂಡಾಮಣಿ, ೧೨೫)

—"ಸ್ವತಃಸಿದ್ಧನೂ 'ನಾನು' ಎಂಬ ಪ್ರತ್ಯಯಕ್ಕೆ ಆಶ್ರಯನೂ

ಅವಸ್ಥಾತ್ರಯಕ್ಕೆ ಸಾಕ್ಷಿಯೂ ಪಂಚಕೋಶಗಳಿಂದ ಭಿನ್ನನೂ ಆದ ಸತ್ತಾಮಾತ್ರನು ಒಬ್ಬನು ಇರಬೇಕು."

## ಇರುವಿಕೆ ಮತ್ತು ಆಗುವಿಕೆ

ಈಗ ನಾವು ಇನ್ನೊಂದು ಮುಖ್ಯ ಅಂಶಕ್ಕೆ ಬರುತ್ತೇವೆ. ಅದೇ "ಇರುವಿಕೆ"—(Being). ಈ ಇರುವಿಕೆಯೆ ಆತ್ಯಂತಿಕ ಸತ್ಯ, ಸುಪ್ತ ದೈವಿಕತೆ, ಇದೇ ಕ್ರಿಯೆಯನ್ನು ನೋಡುತ್ತಿರುವ ಸಾಕ್ಷೀ. ಉಳಿದುದೆಲ್ಲವೂ "ಆಗುವಿಕೆ" (becoming). ನಿಜವಾಗಿ ನೋಡುವವನು, ಕೇಳುವವನು, ತಿಳಿಯುವವನು ಎಲ್ಲವೂ ಈ ಸಾಕ್ಷೀ ಚೈತನ್ಯನೇ ಎಂದು ಕೇನೋಪನಿಷತ್ತು ಹೇಳುತ್ತದೆ (೧.೨). ಬೃಹದಾರಣ್ಯಕ ಉಪನಿಷತ್ತಿನಲ್ಲಿ (೩.೭.೨೩) ಹೀಗಿದೆ: ಅದೃಷ್ಟೋ ದ್ರಷ್ಟಾಽಶ್ರುತಃ ಶ್ರೋತಾಽಮತೋ ಮಂತಾಽವಿಜ್ಞಾತೋ ವಿಜ್ಞಾತಾ| ನಾನ್ಯೋಽತೋಽಸ್ತಿ ದ್ರಷ್ಟಾ, ನಾನ್ಯೋಽತೋಽಸ್ತಿ ಶ್ರೋತಾ ನಾನ್ಯೋಽತೋಽಸ್ತಿ ಮಂತಾ ನಾನ್ಯೋಽತೋಽಸ್ತಿ ವಿಜ್ಞಾತಾ |— "ಅವನು ನೋಡಲ್ಪಡದೆ ನೋಡುವವನು, ಕೇಳಲ್ಪಡದೆ ಕೇಳುವವನು, ಚಿಂತಿಸಲ್ಪಡದೆ ಚಿಂತಿಸುವವನು ಮತ್ತು ತಾನು ತಿಳಯಲ್ಪಡದೆ ಎಲ್ಲವನ್ನೂ ತಿಳಿಯುವವನು. ಅವನಿಗಿಂತ ಬೇರೆಯಾದ ನೋಡುವವನಿಲ್ಲ, ಅವನಿಗಿಂತ ಬೇರೆಯಾದ ಕೇಳುವವನಿಲ್ಲ, ಅವನಿಗಿಂತ ಬೇರೆಯಾದ ಚಿಂತಿಸುವವನಿಲ್ಲ ಮತ್ತು ಅವನಿಗಿಂತ ಬೇರೆಯಾದ ತಿಳಿಯುವವನಿಲ್ಲ." ನಾವು ದಿವ್ಯತೆಯ ಸಾಕ್ಷಾತ್ಕಾರ ಅಥವಾ ಸತ್ಯಸಾಕ್ಷಾತ್ಕಾರ ಎನ್ನುವಾಗ ಈ "ಇರುವಿಕೆ"ಯನ್ನೇ ನಿರ್ದೇಶಿಸುತ್ತೇವೆ. ಅಂದರೆ ನಾವು ಜ್ಞಾನ ಮತ್ತು ಕ್ರಿಯೆಗಳಿಗೆ ಅತೀತರು, "ಆಗುವಿಕೆ"ಯನ್ನು ಮೀರಿದವರು ಎಂಬುದನ್ನು ಸಾಕ್ಷಾತ್ಕರಿಸಿಕೊಳ್ಳಬೇಕು.

## ಇರುವಿಕೆಯಲ್ಲಿ ಇರುವ ತುಡಿತ

ನಾವು ಆಗುವಿಕೆಯನ್ನು ಅಂದರೆ ಪ್ರಕೃತಿಯನ್ನು ಮೀರಿ ಹೋಗಲು ಏಕೆ ಪ್ರಯತ್ನಿಸಬೇಕು? ಪ್ರಕೃತಿ ವಿಕಾರಗಳೊಂದಿಗೇ ತೃಪ್ತರಾಗಿ ನಾವು ಏಕೆ ಇರಬಾರದು? ಅತೀತವಾದುದನ್ನು ಅರಸುವುದು ಮಾನವಸ್ವಭಾವದಲ್ಲಿಯೇ ಬೇರುಬಿಟ್ಟಿರುವಂತೆ ಕಂಡುಬರುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, "ಯಾವ ವ್ಯಕ್ತಿಯೂ ತೃಪ್ತಿಯಿಂದಿರುವುದಿಲ್ಲ. ಅದೇ ದುಃಖಕ್ಕೆ ಮೂಲ ಕಾರಣ. ಆದರೆ ಅದೇ ಒಂದು ದೊಡ್ಡ ಸೌಭಾಗ್ಯವೂ ಕೂಡ. ಅದೊಂದು ನಿರ್ದಿಷ್ಟವಾದ ಚಿಹ್ನೆ. ಈ ಪ್ರಪಂಚದಲ್ಲಿ ಅವನು ತೃಪ್ತಿಯಿಂದಿರಲು ಹೇಗೆ ಸಾಧ್ಯ?... ನಾಳೆ ಈ ಪ್ರಪಂಚವೇ ಸ್ವರ್ಗವಾದರೂ ಕೂಡ ನಾವು ಹೇಳುತ್ತೇವೆ, 'ಇದನ್ನು ತೆಗೆದುಕೊಂಡು ಹೋಗು, ನಮಗೆ ಬೇರೊಂದನ್ನು ಕೊಡು' ಎಂದು."

ಧರ್ಮದ ವಿಷಯವಾಗಿಯೂ ವಿವಿಧ ಧರ್ಮಗಳ ಬಗ್ಗೆಯೂ ಆಳ ಅಧ್ಯಯನವನ್ನು ನಡೆಸಿರುವ ಹ್ಯೂಸ್ಟನ್ ಸ್ಮಿತ್ (Huston Smith) ಎಂಬುವವರು ಹೇಳುತ್ತಾರೆ: "ನಮಗೆ ತಿಳಿಯಲಿ, ತಿಳಿಯದೆ ಇರಲಿ, ಮಾನವನಾಗಿರುವುದೆಂದರೇನೇ ಸಾಂತತೆ ಮತ್ತು ಮರ್ತ್ಯತೆಗಳ ಗೋಡೆಗಳಿಂದ ಆವೃತವಾದ ಈ ಲೌಕಿಕ ಅಸ್ತಿತ್ವದಿಂದ ಬಿಡುಗಡೆ ಹೊಂದುವ ಹಂಬಲವನ್ನು ಪಡೆದಿರುವುದು" (*Why Religion Matters*, p.28). ಇನ್ನೊಂದು ಸಂದರ್ಭದಲ್ಲಿ ಅವರು ಹೇಳುತ್ತಾರೆ: "ಭಗವಂತನ ಪ್ರತಿರೂಪವಾಗಿ ಸೃಷ್ಟಿಸಲ್ಪಟ್ಟಿರುವ ಈ ಮಾನವರ ಹೃದಯದಲ್ಲಿ ಭಗವದಾಕಾರದ ಒಂದು ಶೂನ್ಯಾಕಾಶವು ಅಂತರ್ನಿಹಿತವಾಗಿದೆ. ಪ್ರಕೃತಿಯು ಶೂನ್ಯವನ್ನು ಸಹಿಸದೆ ಇರುವುದರಿಂದ ಜನರು ತಮ್ಮಲ್ಲಿರುವ ಈ ಶೂನ್ಯವನ್ನು ಹೇಗಾದರೂ ಮಾಡಿ ತುಂಬಲು ಪ್ರಯತ್ನಿಸುತ್ತಾರೆ. ಅದಕ್ಕೆ ಹೊಂದಿಕೆಯಾಗುವ ದಿವ್ಯರೂಪವನ್ನು ಹುಡುಕುತ್ತಾ ಅವರು ಬೇರೆ ಬೇರೆ ವಿಷಯಗಳಲ್ಲಿ ಕೈಹಾಕುತ್ತಾರೆ. ಜಿಗ್‌ಸಾ ಸಮಸ್ಯೆಯಲ್ಲಿಯಂತೆ, ಒಂದಾದಮೇಲೆ ಒಂದು ವಸ್ತುವನ್ನು ಆ ಅಂತರದೊಂದಿಗೆ ಹೊಂದಿಸಲು ಪ್ರಯತ್ನಿಸುತ್ತಾರೆ. ಕೊನೆಗೆ ಸರಿಯಾದ ವಸ್ತು ಸಿಕ್ಕುವವರೆಗೂ ಈ ಪ್ರಯತ್ನ ಮುಂದುವರಿಯುತ್ತದೆ. ಆ ಅಂತರಕ್ಕೆ ಸರಿಯಾಗುವ ವಸ್ತು ಸಿಕ್ಕಿದಾಗ ಜೀವನದ ಜಿಗ್‌ಸಾ ಸಮಸ್ಯೆ ಪರಿಹಾರವಾದಂತಾಗುತ್ತದೆ" (ಅದೇ, ಪು. ೧೪೪).

> ಅನಂತಾತ್ಮವು ಸಾಂತ ವಸ್ತುಗಳಿಂದ ತೃಪ್ತಿಯನ್ನು ಪಡೆಯಲು ಸಾಧ್ಯವಿಲ್ಲ. ಅದು ಅನಂತವನ್ನೇ ಅರಸುತ್ತದೆ. ಈ ಅರಸುವಿಕೆಯೇ ಧರ್ಮ.
>
> —ಸ್ವಾಮಿ ವಿವೇಕಾನಂದ

ಈ ದಿವ್ಯ ಸಾಕ್ಷಾತ್ಕಾರಕ್ಕೂ ಪ್ರಕೃತಿ ವಲಯಕ್ಕೆ ಸೇರಿದ ಕಾರ್ಯಕುಶಲತೆಗೂ ಸಂಬಂಧವೇನು? ಇರುವಿಕೆಯಲ್ಲಿ ಮನಸ್ಸನಿಟ್ಟು, ಆಗುವಿಕೆಯ ಕ್ಷೇತ್ರದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು ಸಾಧ್ಯವೇ?

## ಇರುವಿಕೆಯೇ ಉತ್ಕೃಷ್ಟತೆ

ನಿಜವಾಗಿಯೂ ಎಲ್ಲ ಉತ್ಕೃಷ್ಟತೆಯೂ ಇರುವಿಕೆಗೇ ಸೇರಿದುದು, ಏಕೆಂದರೆ ಅದೇ ಅಸ್ತಿತ್ವದ ಅತ್ಯುನ್ನತ ಸ್ಥಿತಿ. ವ್ಯಾವಹಾರಿಕ ಕ್ಷೇತ್ರದಲ್ಲಿ ಕೆಲಸದ ಸ್ವರೂಪ ಮತ್ತು ವ್ಯಕ್ತಿಯ ಸಾಮರ್ಥ್ಯ ಇವುಗಳಿಗೆ ಅನುಸಾರವಾಗಿ ಉತ್ಕೃಷ್ಟತೆ ಮತ್ತು ಪರಿಪೂರ್ಣತೆಯಲ್ಲಿ ತಾರತಮ್ಯವಿರುತ್ತದೆ. ದೈಹಿಕ ಮತ್ತು ಮಾನಸಿಕ ಶಕ್ತಿವರ್ಧನೆಯ ಮೂಲಕ ಉತ್ಕೃಷ್ಟತೆಯನ್ನು ಹೆಚ್ಚಿಸಬಹುದು. ಆದರೆ ಇರುವಿಕೆಯಲ್ಲಿ ಉತ್ಕೃಷ್ಟತೆಯ ತಾರತಮ್ಯವಿರುವುದಿಲ್ಲ, ಏಕೆಂದರೆ ಉತ್ಕೃಷ್ಟತೆಯೇ ಅದು. ಅದು ಶಕ್ತಿ, ಆನಂದ ಮತ್ತು ಜ್ಞಾನಗಳ ಅತ್ಯುನ್ನತ ಅಭಿವ್ಯಕ್ತಿ, ಇವೆಲ್ಲದರ ಮೂಲವೇ ಅದು. ಸ್ವಾಮಿ ಅಶೋಕಾನಂದರು ಹೇಳುತ್ತಾರೆ: "ಶಕ್ತಿ ವಿಕಾಸದ ಶ್ರೇಣಿವ್ಯವಸ್ಥೆಯನ್ನು ತಿಳಿದುಕೊಳ್ಳಿ: ಅತ್ಯಂತ ಕೆಳಮಟ್ಟದ್ದು ಏನನ್ನೋ ಸಾಧಿಸುವ ಶಕ್ತಿ, ಮಧ್ಯಮವರ್ಗದ್ದು ಪ್ರತಿರೋಧಿಸುವ ಶಕ್ತಿ ಮತ್ತು ಅತ್ಯುನ್ನತವಾದದ್ದು ಸುಮ್ಮನೆ ಇರುವ ಶಕ್ತಿ" (*Six Lighted Windows*, P. 156). ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಈ ಸುಪ್ತಾತ್ಮವು ಜಾಗೃತವಾಗಿ ಕ್ರಿಯಾಶೀಲವಾದಾಗ ಶಕ್ತಿ ಬರುತ್ತದೆ, ವೈಭವ ಬರುತ್ತದೆ, ಒಳ್ಳೆಯತನ

**ಆಧ್ಯಾತ್ಮಿಕ ಮನೋಭಾವವು ದುಡಿಮೆ ಮತ್ತು ಬಿಡುವಿನ ನಡುವೆ ಇರುವ ವ್ಯತ್ಯಾಸವನ್ನು ಅಳಿಸಿಹಾಕುತ್ತದೆ. ಆಗ ವ್ಯಕ್ತಿಯು ದುಡಿಮೆಯಲ್ಲಿ ಬಿಡುವಿನ ಆನಂದವನ್ನೂ ಬಿಡುವಿನಲ್ಲಿ ದುಡಿಮೆಯ ಸೃಜನಾತ್ಮಕತೆಯನ್ನೂ ಕಾಣುತ್ತಾನೆ.**

ಬರುತ್ತದೆ, ಪಾವಿತ್ರ್ಯ ಬರುತ್ತದೆ ಮತ್ತು ಉತ್ಕೃಷ್ಟವಾದುದು ಏನೇನುಂಟೋ ಅದೆಲ್ಲ ಬರುತ್ತದೆ." ಈ ಎಲ್ಲ ಗುಣಗಳೂ ದಿವ್ಯತೆಯ ಅವಿಭಾಜ್ಯ ಅಂಶಗಳಾಗಿರುವುದರಿಂದ, ದಿವ್ಯತೆಯ ಸಾಕ್ಷಾತ್ಕಾರವನ್ನು ಇವೆಲ್ಲವೂ ಅನುಸರಿಸುತ್ತವೆ.

### ಲೌಕಿಕ ಅಲೌಕಿಕಗಳ ಸಂಬಂಧ

ಈ ದಿವ್ಯ ಉತ್ಕೃಷ್ಟತೆಯು ನಮ್ಮ ದಿನನಿತ್ಯದ ಚಟುವಟಿಕೆಯಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು ಸಹಾಯ ಮಾಡುತ್ತದೆಯೆ ಎಂಬುದು ಪ್ರಶ್ನೆ. ಸ್ವಾಮಿ ವಿವೇಕಾನಂದರ "ಬೆಸ್ತನು ತಾನು ಆತ್ಮ ಎಂದು ತಿಳಿದರೆ ಅವನು ಉತ್ತಮ ಬೆಸ್ತನಾಗುತ್ತಾನೆ..... ..." ಮುಂತಾದ ಹೇಳಿಕೆಗಳು ಈ ಪ್ರಶ್ನೆಗೆ ಇತ್ಯಾತ್ಮಕ ಉತ್ತರವನ್ನು ನೀಡುತ್ತವೆ. ತನ್ನ ಕಾರ್ಯದಲ್ಲಿ ಅತ್ಯಂತ ದಕ್ಷನಾಗಿರುವ ಒಬ್ಬ ಬೆಸ್ತನಿದ್ದಾನೆಂದು ಭಾವಿಸೋಣ. ಅವನು ತಾನು ಆತ್ಮ ಎಂದು ಭಾವಿಸತೊಡಗಿದರೆ ಏನಾಗುತ್ತದೆ? ಅವನು ಪವಾಡವೆಂಬಂತೆ ಹೆಚ್ಚು ಮೀನನ್ನು ಹಿಡಿದು ಹೆಚ್ಚು ಹಣ ಸಂಪಾದಿಸುತ್ತಾನೆಂದಲ್ಲ. ಆದರೆ ಅವನ ಕಾರ್ಯದಕ್ಷತೆಯೊಂದಿಗೆ ಚಾರಿತ್ರ್ಯ ದಕ್ಷತೆಯೂ ಸೇರಿಕೊಳ್ಳುತ್ತದೆ. ಇವೆರಡರ ಒಗ್ಗೂಡುವಿಕೆ ಅವನನ್ನು ಉತ್ತಮ ಬೆಸ್ತನನ್ನಾಗಿ ಮಾಡುತ್ತದೆ.

### ವ್ಯವಹಾರ ಜೀವನದ ವೈಭವೀಕರಣ

ಅದ್ವೈತದ ದಿವ್ಯಜ್ಞಾನವು ಬೆಸ್ತನು ವ್ಯವಹಾರದಲ್ಲಿ ಉತ್ಕೃಷ್ಟತೆಯನ್ನು ಸಾಧಿಸುವ ಉದ್ದೇಶಕ್ಕಿಂತಲೂ ಶ್ರೇಷ್ಠವಾದ ಉದ್ದೇಶವನ್ನು ಹೊಂದಿದೆ. ಆದ್ದರಿಂದಲೇ ಶ್ರೀರಾಮಕೃಷ್ಣರು ಅದನ್ನು ಬಟ್ಟೆಯ ತುದಿಗೆ ಕಟ್ಟಿಕೊಂಡು ಅನಂತರ ವ್ಯವಹಾರದಲ್ಲಿ ತೊಡಗಲು ಹೇಳಿದರು. ಅದೊಂದು ಶ್ರೇಷ್ಠ ಹಿನ್ನೆಲೆಯಾಗಿ ಕೆಲಸ ಮಾಡುತ್ತದೆ. ಆಗ ಎಲ್ಲ ಕೆಲಸವೂ ದಿವ್ಯವಾಗುತ್ತದೆ, ಜೀವನವೇ ದಿವ್ಯವಾಗುತ್ತದೆ. ಆಗ ವ್ಯಕ್ತಿಯು ತಪ್ಪು ಹೆಜ್ಜೆ ಹಾಕುವುದಿಲ್ಲ. ಅವನ ಕಾರ್ಯಕ್ಷೇತ್ರದಲ್ಲಿ ಸೋಲುಗಳುಂಟಾಗಬಹುದು. ಅದು ಸ್ವಾಭಾವಿಕ. ಆದರೆ ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಅವನೆಂದೂ ಎಡುವುವುದಿಲ್ಲ.

ಈ ಶೀಲ-ಉತ್ಕೃಷ್ಟತೆಯು ಕಾರ್ಯ-ಉತ್ಕೃಷ್ಟತೆಯನ್ನು ವೈಭವೀಕರಿಸುತ್ತದೆ. ಅಮೆರಿಕದ ಎಂ.ಐ.ಟಿ ಯಲ್ಲಿರುವ ಚೀನೀ ವಿಜ್ಞಾನಿ ಆರ್.ಜಿ.ಎಚ್. ಸಿಉ (Siu) ಹೇಳುತ್ತಾರೆ: "ತಾತ್ತ್ವಿಕ ಕಾರ್ಯನಿರ್ವಾಹಕನ ಕಾರ್ಯಪರಿಣತಿಯ ಹಿಂದೆ ಸೂಕ್ತ ಜ್ಞಾನದ ಮಾರ್ಗದರ್ಶನವಿರುತ್ತದೆ. ಅವನು ಅಂತರಂಗದಲ್ಲಿ ಆಧ್ಯಾತ್ಮಿಕ ಸ್ಥಿರತೆಯನ್ನು ಹೊಂದಿರುತ್ತಾನೆ, ಬಹಿರಂಗದಲ್ಲಿ ಸಾಮಾಜಿಕ ಹಿತವನ್ನು ಸಾಧಿಸುತ್ತಾನೆ. ಹಳೆಯ ಚೀನೀ ಗಾದೆಯಂತೆ ಅವನು ಅಂತಸ್ಸಂತನೂ ಬಾಹ್ಯ ಚಕ್ರವರ್ತಿಯೂ ಆಗಿರುತ್ತಾನೆ." (ನೋಡಿ, ಸ್ವಾಮಿ ರಂಗನಾಥಾನಂದರ *ಭಗವದ್ಗೀತೆಯ ವಿಶ್ವಸಂದೇಶ* ಸಂಪುಟ ೧, ಪುಟ. ೪೪೧).

### ಕರ್ಮದಲ್ಲಿ ಅನಾಸಕ್ತಿ

ಈ ಆಧ್ಯಾತ್ಮಿಕ ಮನೋಭಾವದೊಂದಿಗೆ ವ್ಯಕ್ತಿಯು ಅನಾಸಕ್ತಿಯಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ. ಆಗ ಕೆಲಸವು ಬಲವಂತ ದುಡಿತವಾಗುವುದಿಲ್ಲ, ಅದು ಸೃಜನಾತ್ಮಕ ಆನಂದವನ್ನು ನೀಡುತ್ತದೆ. ಆಗ ವ್ಯಕ್ತಿಯು ಸುಖ ಮತ್ತು ಆನಂದವನ್ನು ತನ್ನ ಕಾರ್ಯಕ್ಷೇತ್ರದಿಂದ ಹೊರಗೆ ಅರಸಬೇಕಾಗಿಲ್ಲ. "ಮನಸ್ಸಿನಲ್ಲಿ ಉತ್ಸಾಹವನ್ನು ಕೆರಳಿಸದೆ ದುಡಿಮೆಯು ಕೇವಲ ದೇಹಶ್ರಮವಾದಾಗ, ಜನರು ಬಿಡುವಿನ ವೇಳೆಯಲ್ಲಿ ಬಾಹ್ಯೋದ್ರೇಕಗಳನ್ನು ಅರಸಿಕೊಂಡು ಹೋಗುತ್ತಾರೆ. ಇವರ ಮನರಂಜನೆಗಾಗಿ ಹೆಚ್ಚು ಹೆಚ್ಚು ಜನರು ದುಡಿಯಬೇಕಾಗುತ್ತದೆ. ಅಂದರೆ ಬಿಡುವಿನಿಂದ ದುಡಿಮೆ ಅಧಿಕವಾಗುತ್ತದೆ... ಒಂದು ಸಮುದಾಯದಲ್ಲಿ ಬಿಡುವಿನ ಆಧಿಕ್ಯದಿಂದ ದುಡಿಮೆಯೇನೂ ಕಡಮೆಯಾಗುವುದಿಲ್ಲ. ಆ ಬಿಡುವಿನ ವೇಳೆಯನ್ನು ನಿದ್ರೆ ಅಥವಾ ಮೌನ ಧ್ಯಾನದಲ್ಲಿ ಕಳೆಯುವುದಾಗಿದ್ದರೆ ಆಗ ಅದರಿಂದ ದುಡಿಮೆಯು ಕಡಮೆಯಾಗುತ್ತಿತ್ತು.

"ನಾಗರಿಕತೆಯು ಮುಂದುವರಿದಂತೆ ಬಿಡುವು ಅಧಿಕವಾಗುತ್ತದೆ, ಮತ್ತು ಸಾಮಾಜಿಕ ಸಮಸ್ಯೆಯ ಗುರುತ್ವಕೇಂದ್ರವು ದುಡಿಮೆಯ ಕ್ಷೇತ್ರದಿಂದ ಬಿಡುವಿನ ಕ್ಷೇತ್ರಕ್ಕೆ ವರ್ಗಾಯಿಸಲ್ಪಡುತ್ತದೆ. ನಾಗರಿಕತೆಯು ಬಿಡುವನ್ನು ಹೇಗೆ ಉಪಯೋಗಿಸಿಕೊಳ್ಳುತ್ತದೆ ಎಂಬುದೇ ಅದರ ಅಗ್ನಿಪರೀಕ್ಷೆ. ಆಧ್ಯಾತ್ಮಿಕತೆಯನ್ನು ಜೀವನದ ಹಿನ್ನೆಲೆ ಮತ್ತು ಗುರಿಯನ್ನಾಗಿ ಮಾಡಿಕೊಂಡಾಗಲೆ ನಾಗರಿಕತೆಯು ಈ ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸಬಲ್ಲದು" (*ಅದೇ*, ಪು. ೪೩೭).

ಆಧ್ಯಾತ್ಮಿಕ ಮನೋಭಾವ ದುಡಿಮೆ ಮತ್ತು ಬಿಡುವಿನ ನಡುವೆ ಇರುವ ವ್ಯತ್ಯಾಸವನ್ನು ಅಳಿಸಿಹಾಕುತ್ತದೆ. ಆಗ ವ್ಯಕ್ತಿಯು ದುಡಿಮೆಯಲ್ಲಿ ಬಿಡುವಿನ ಆನಂದವನ್ನೂ ಬಿಡುವಿನಲ್ಲಿ ದುಡಿಮೆಯ ಸೃಜನಾತ್ಮಕತೆಯನ್ನೂ ಕಾಣುತ್ತಾನೆ ಮತ್ತು ಅವೆರಡನ್ನೂ ವೈಭವೀಕರಿಸುತ್ತಾನೆ. ದಿವ್ಯ ಉತ್ಕೃಷ್ಟತೆ ಮತ್ತು ಕ್ರಿಯೋತ್ಕೃಷ್ಟತೆಗಳೆರಡೂ ಆಪಾತತಃ ಬೇರೆ ಬೇರೆಯಾಗಿ ಕಂಡರೂ, ಬೇರೆ ಬೇರೆ ಕ್ಷೇತ್ರಗಳಿಗೆ ಸೇರಿದವೆಂದು ಕಂಡುಬಂದರೂ ನಿಜವಾಗಿಯೂ ಅವೆರಡೂ ಒಂದೇ ಆಧ್ಯಾತ್ಮಿಕ ಮೂಲದ ಅಭಿವ್ಯಕ್ತಿಗಳು, ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಅವರು ಹೇಳುತ್ತಾರೆ: "ಈ ಆತ್ಮದ ಅನಂತ ಶಕ್ತಿಯನ್ನು ಭೌತಿಕ ಪ್ರಪಂಚದ ಮೇಲೆ ಬೀರಿದರೆ ಹಲವು ಭೌತಿಕ ಬೆಳವಣಿಗೆಗಳಾಗುವುವು, ಆಲೋಚನಾ ಪ್ರಪಂಚದ ಮೇಲೆ ಬೀರಿದರೆ ಬುದ್ಧಿ ತನ್ನ ಪರಾಕಾಷ್ಠೆಯನ್ನು ಮುಟ್ಟುವುದು, ತನ್ನ ಮೇಲೆಯೇ ಅದನ್ನು ಬೀರಿಕೊಂಡರೆ ಮಾನವನನ್ನು ದೇವನನ್ನಾಗಿ ಮಾಡುವುದು." (*ವ್ಯಕ್ತಿತ್ವ ನಿರ್ಮಾಣ*, ಪು. ೨೪)